# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343 ಇ-ಮೇಲ್ ವಿಳಾಸ : director.ahr.kptcl@gmail.com

**ಸಂಖ್ಯೆ: ಕವಿಪ್ರನಿನಿ/ಔಬಾ/ಬಿ110/7186/88-89** **ದಿನಾಂಕ: 23.11.2023**

## ಸುತ್ತೋಲೆ

**ವಿಷಯ:** ಕವಿಮಂ ಇಂಜಿನಿಯರ್‌ಗಳ ಸಂಘದ(ರಿ) ವೆಲ್‌ಫೇರ್ ಸ್ಕೀಂ ಅನ್ವಯ ಸಂಘದ ಸದಸ್ಯರುಗಳ ವೇತನದಿಂದ ಮರಣ ಪರಿಹಾರ ನಿಧಿಗೆ ವಂತಿಗೆಯನ್ನು ಕಡಿತಗೊಳಿಸುವ ಬಗ್ಗೆ.

**ಉಲ್ಲೇಖ:**
1. ನಿಗಮದ ಸುತ್ತೋಲೆ ಸಮ ಸಂಖ್ಯೆ, ದಿನಾಂಕ: 22.12.2018.
2. ನಿಗಮದ ಪತ್ರ ಸಮ ಸಂಖ್ಯೆ, ದಿನಾಂಕ: 21.02.2019, 21.03.2019, 21.05.2019, 17.08.2019, 24.10.2019, 22.11.2019, 18.03.2020, 14.12.2020, 20.01.2021, 26.05.2021, 05.07.2021, 25.08.2021, 02.11.2021, 24.02.2022, 21.05.2022, 24.08.2022, 27.10.2022, 18.01.2023, 22.05.2023, 16.10.2023.
3. ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು ರವರ ಪತ್ರ ಸಂ.: ಕೆ.ಇ.ಬಿ.ಇ.ಎ/ಪಿ.ಆರ್./2023-24/108, ದಿನಾಂಕ: 07.11.2023.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕವಿಮಂ ಇಂಜಿನಿಯರ್‌ಗಳ ಸಂಘದಲ್ಲಿ **"ಕವಿಮಂ ಇಂಜಿನಿಯರ್ ಗಳ ವೆಲ್ ಫೇರ್ ಸ್ಕೀಂ"** ಅನ್ನು ಅಳವಡಿಸಿಕೊಂಡಿದ್ದು, ಸದರಿ ಸ್ಕೀಂ ಅನ್ವಯ ಸಂಘದಲ್ಲಿನ ಸದಸ್ಯರುಗಳು ಅಕಾಲಿಕ ಮರಣ ಹೊಂದಿದರೆ, ಸದರಿಯವರ ಕುಟುಂಬದ ಕಷ್ಟದ ಸಮಯದಲ್ಲಿ ನೆರವಾಗುವ ಉದ್ದೇಶದಿಂದ, ಸಂಘದ ಎಲ್ಲಾ ಸದಸ್ಯರುಗಳ ವೇತನದಿಂದ ರೂ. 400.00 ಮೊತ್ತವನ್ನು ಕಡಿತಗೊಳಿಸಿ, ಮರಣ ಹೊಂದಿದ ಸದಸ್ಯರ ಅವಲಂಬಿತರಿಗೆ ರೂ. 5 ಲಕ್ಷಗಳ ಮೊತ್ತ ನೀಡಲಾಗುತ್ತಿದೆ. ವಯೋನಿವೃತ್ತಿ ಹೊಂದಿದ ಪ್ರಕರಣಗಳಲ್ಲಿ ನಿವೃತ್ತಿ ಹೊಂದುವವರೆಗೂ ಕವಿಮಂ ಇಂಜಿನಿಯರ್‌ಗಳ ವೆಲ್ ಫೇರ್ ಸ್ಕೀಂ ನ ಅಡಿಯಲ್ಲಿ ಕಡಿತಗೊಳಿಸಲಾದ ಮೊತ್ತವನ್ನು ನಿವೃತ್ತಿ ಹೊಂದಿದ ಸದಸ್ಯರುಗಳಿಗೆ ಹಿಂದಿರುಗಿಸಲಾಗುತ್ತಿದೆ.

ಉಲ್ಲೇಖ (2) ರಲ್ಲಿನ ಪತ್ರ/ಸುತ್ತೋಲೆಗಳಲ್ಲಿ, ಸದರಿ ಸಂಘದ ಸದಸ್ಯರುಗಳು ಮರಣ ಹೊಂದಿದಾಗ ಸಂಘದ ಕೋರಿಕೆಯನ್ವಯ ಕವಿಪ್ರನಿನಿ/ಎಸ್ಕಾಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘದ ಸದಸ್ಯರುಗಳ ವೇತನದಿಂದ ರೂ.400.00 ಮೊತ್ತವನ್ನು ಕಡಿತಗೊಳಿಸಿ ಸಂಘಕ್ಕೆ ಸಂದಾಯ ಮಾಡಲು ನಿಗಮದಿಂದ ತಿಳಿಸಲಾಗಿದೆ. ಆದರೆ, ಕವಿಪ್ರನಿನಿ/ಎಸ್ಕಾಂಗಳಲ್ಲಿನ ಬಹುತೇಕ ವೇತನ ಬಟವಾಡೆ ಅಧಿಕಾರಿಗಳು ನಿಗಮದಿಂದ ಪತ್ರ/ಸುತ್ತೋಲೆಗಳನ್ನು ಹೊರಡಿಸಿದರೂ ಸಹಾ, ಸಂಘದ ಸದಸ್ಯರ ವೇತನದಿಂದ ರೂ. 400.00 ಮೊತ್ತವನ್ನು ಕಡಿಗೊಳಿಸಿ ಸಂಘಕ್ಕೆ ಸಂದಾಯ ಮಾಡುತ್ತಿಲ್ಲವೆಂದು ಕವಿಮಂ ಇಂಜಿನಿಯರ್‌ಗಳ ಸಂಘದ ಅಧ್ಯಕ್ಷರು ಉಲ್ಲೇಖ (3) ರಲ್ಲಿನ ಪತ್ರದಲ್ಲಿ ತಿಳಿಸಿರುತ್ತಾರೆ.

-2

ಆದುದರಿಂದ, ಕವಿಮಂ ಇಂಜಿನಿಯರ್‌ಗಳ ಸಂಘದ ಸದಸ್ಯರುಗಳು ಮರಣ ಹೊಂದಿದ ಸಂಧರ್ಭದಲ್ಲಿ ನಿಗಮದಿಂದ ಆದೇಶ ಹೊರಡಿಸಿದಾಗ, ಸದರಿ ಸಂಘದ ಸದಸ್ಯರುಗಳಿಂದ ಸ್ಕೀಂ ಅನ್ವಯ ಮರಣ ಪರಿಹಾರ ವಂತಿಗೆ ಕಡಿತಗೊಳಿಸಲು ಪ್ರತಿಯೊಬ್ಬ ವೇತನ ಬಟವಾಡೆ ಅಧಿಕಾರಿಗಳು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘದ ಎಲ್ಲಾ ಸದಸ್ಯರುಗಳ ಗಮನಕ್ಕೆ ತಂದು ಸಂಬಂಧಿಸಿದವರ ವೇತನದಿಂದ ಕಡ್ಡಾಯವಾಗಿ ಕಡಿತಗೊಳಿಸಿ, ಸಂಘಕ್ಕೆ ಸಂದಾಯ ಮಾಡುವಂತೆ ಮತ್ತೊಮ್ಮೆ ಈ ಮೂಲಕ ಸೂಚಿಸಲಾಗಿದೆ.

**ನಿರ್ದೇಶಕರು(ಆ ಮತ್ತು ಮಾ.ಸಂ),**
**ಕವಿಪ್ರನಿನಿ.**

**ಪ್ರತಿಯನ್ನು ಮಾಹಿತಿಗಾಗಿ:**

1. ಎಲ್ಲಾ ಮುಖ್ಯ ಇಂಜಿನಿಯರ್, ಕವಿಪ್ರನಿನಿ/ಎಸ್ಕಾಂಗಳು.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
3. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ (ಹಣಕಾಸು)/ (ಆ ಮತ್ತು ಮಾ.ಸಂ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು.
4. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com --> eprasarna ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ.**

5. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂಗಳು.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂಗಳು.
7. ಎಲ್ಲಾ ಲೆಕ್ಕಾಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು (ಆಂ.ಪ), ಕವಿಪ್ರನಿನಿ/ ಎಸ್ಕಾಂಗಳು.
8. ವ್ಯವಸ್ಥಾಪಕರು(ಆಂ.ನಿ) ಮತ್ತು ವ್ಯವಸ್ಥಾಪಕರು(ನಗದು ಮತ್ತು ಲೆಕ್ಕಗಳು), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಗಳನ್ನು ಮಾಹಿತಿಗಾಗಿ:**

9. ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
10. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
11. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರುಗಳ ಸಂಘ,ಬೆಂಗಳೂರು.